<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಷ್ಮೇಶ್ವರ</u>

ಚಾಸಾಃ 2 ಫ್ರಾಸಾಃ 2

| | | |
|---|---|---|
| ಸಾಕ್ಷಿಯ ಹೆಸರು | : | ಶಿವಾನಂದ ತಂದೆ ಮಹಾದೇವಪ್ಪ ಕಳ್ಳಿಮನಿ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಕೂಲಿ |
| ವಿಳಾಸ | : | ಲಕ್ಷ್ಮೇಶ್ವರ |

<u>ದಿನಾಂಕಃ **26.11.2024** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ</u>

ದಿಃ 24.02.2024 ರಂದು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದಂತೆ 1 ನೇ ಆರೋಪಿಯ ಮನೆಯ ಬಳಿ ಬೆಳಿಗ್ಗೆ 9.00 ರಿಂದ 10.00 ಗಂಟೆಯ ವರೆಗೆ ಪೋಲಿಸರು ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯು ಗುನ್ನಾ ಜಾಗೆಯ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೋಲಿಸರು 2 ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಛಾಯಾಚಿತ್ರಗಳಲ್ಲಿ ಸಾಕ್ಷಿ ತಾನು ಇರುವುದಾಗಿ ಗುರುತಿಸಿದ್ದರಿಂದ ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ.8 ಮತ್ತು ನಿಪಿ.9 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ- ಆರೋಪಿತರ ಪರವಾಗಿ **Sri. VRP,** ವಕೀಲರಿಂದ</u>

ನಾನು ಹೊಲ ಮನೆ ಕೆಲಸ ಮಾಡುತ್ತೇನೆ. ನನ್ನದು ಸ್ವಂತ ಕಮತ ಇರುತ್ತದೆ ಎಂದರೆ ಸರಿ. ಪೆಬ್ರುವರಿ ತಿಂಗಳಲ್ಲಿ ಸಾಮಾನ್ಯವಾಗಿ ರೈತರಿಗೆ ಸುಗ್ಗಿ

ಸಮಯ ಎಂದರೆ ಸರಿ. ಸದರಿ ತಿಂಗಳಲ್ಲಿ ಸಾಮಾನ್ಯವಾಗಿ ಎಲ್ಲಾ ರೈತರು ಮುಂಜಾನೆ ಜಮೀನಿಗೆ ಹೋಗಿ ಮಧ್ಯಾಹ್ನ ಹಿಂದಿರುಗುತ್ತಾರೆ ಎಂದರೆ ಸರಿ. ಚಾಸಾ-1 ರವರ ತಂದೆಯವರ ಮನೆ ಮತ್ತು ನನ್ನ ಮನೆ ಅಕ್ಕ ಪಕ್ಕದಲ್ಲಿ ಇದೆ ಎಂದರೆ ಸರಿ. ಚಾಸಾ-1 ರವರ ತಂದೆಯ ಮನೆ ಮತ್ತು ಆರೋಪಿತರ ಮನೆ ಸುಮಾರು ಅರ್ಧ ಕೀಲೋ ಮೀಟರ ಅಂತರದಲ್ಲಿ ಇರಬಹುದು. ಚಾಸಾ-1 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ನಾನು ಸದರಿ ದಿನದಂದು ಶಿಗ್ಲಿಮಠದ ಇಟ್ಟಗೆ ಬಸವಣ್ಣ ಗುಡಿಯ ಬಳಿ ನಿಂತಿದ್ದೆ. ಸದರಿ ಗುಡಿಯ ಬಳಿ ಸುಮಾರು 10 ರಿಂದ 15 ಜನ ನಿಂತಿದ್ದೇವು. ನಾನು ಚಾಸಾ-1 ರವರ ಓಣಿಯಲ್ಲಿ ವಾಸವಾಗಿದ್ದ ಕಾರಣ ಒಬ್ಬರಿಗೊಬ್ಬರು ಸಹಾಯ ಮಾಡಲು ನನ್ನನ್ನು ಪಂಚರಾಗಿ ಸಹಾಯ ಮಾಡಲು ನನ್ನನ್ನು ಕರೆದಿರುತ್ತಾರೆ.

ನಾನು 9 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ಜನನ ದಿನಾಂಕ 01.06.1977 ಎಂದು ನಮೂದಿಸಲಾಗಿದೆ. ನನಗೆ ಪಂಚರಾಗಿ ಸಹಕರಿಸಲು ಅಲ್ಲಿ ನಿಂತಿದ್ದ ನನ್ನನ್ನು ಮತ್ತು ಚಾಸಾ-3 ರವರನ್ನು ಹಿರಿಯರು ಬಂದು ಕೇಳಿರುತ್ತಾರೆ. ಚಾಸಾ-3 ರವರು ಚಾಸಾ-1 ರವರ ದೊಡ್ಡಪ್ಪನಾಗಬೇಕು. ನಿಪಿ.2 ರ ಬರವಣಿಗೆ ಮಾಹಿತಿ ನನಗೆ ಇರುವುದಿಲ್ಲ. ನಾನು ಚಾಸಾ-1 ರವರ ತಂದೆಯ ಸ್ನೇಹಿತನಾಗಿದ್ದು ಯಾವುದೇ ಪಂಚನಾಮೆ ಮಾಡದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

<u>(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)</u>

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.

<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಷ್ಮೇಶ್ವರ</u>

ಚಾಸಾಃ 3 ಫ್ರಾಸಾಃ 3

| | | |
|---|---|---|
| ಸಾಕ್ಷಿಯ ಹೆಸರು | : | ಸೋಮಪ್ಪ ತಂದೆ ಈರಪ್ಪ ಮುಳಗುಂದ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ಕೂಲಿ |
| ವಿಳಾಸ | : | ಲಕ್ಷ್ಮೇಶ್ವರ |

<u>ದಿನಾಂಕಃ **26.11.2024** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ</u>

ಚಾಸಾ-1 ನನ್ನ ಮೊಮ್ಮಗಳು. ಚಾಸಾ-4 ನನ್ನ ಮಗ. ಚಾಸಾ-5 ನನ್ನ ಸೊಸೆ. ಚಾಸಾ-6 ನನ್ನ ಸಂಬಂಧಿ. ಚಾಸಾ-7 ರಿಂದ 11 ರವರು ನಮ್ಮ ಓಣಿಯವರು.

ಜನೇವರಿ ತಿಂಗಳಲ್ಲಿ ಚಾಸಾ-1 ರವರನ್ನು ಅವರ ಮನೆಗೆ 1 ನೇ ಆರೋಪಿಯು ಕರೆದುಕೊಂಡು ಹೋಗಿರುತ್ತಾನೆ. ನಾನು ಚಾಸಾ-1 ರವರು ಕಾಣೆಯಾಗಿದ್ದಾರೆ ಎಂದು ಪೋಲಿಸ ಠಾಣೆಯಲ್ಲಿ ದೂರು ದಾಖಲಿಸಿದ್ದು. ನಂತರ ಚಾಸಾ-1 ಮತ್ತು 1 ನೇ ಆರೋಪಿಗೆ ಮದುವೆ ಮಾಡಿರುತ್ತೇವೆ. 1 ನೇ ಆರೋಪಿತನು ಚಾಸಾ-1 ರವರಿಗೆ ವಿನಾಕಾರಣ ಬೈಯುವುದು ಹೊಡೆಯುವುದು ಮಾಡುತ್ತಿದ್ದ. ನಂತರ ನಾವು ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ.

ದಿಃ 24.02.2024 ರಂದು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಚಾಸಾ-1 ರವರು ತೋರಿಸಿದಂತೆ 1 ನೇ ಆರೋಪಿಯ ಮನೆಯ ಬಳಿ ಬೆಳಿಗ್ಗೆ 9.00 ರಿಂದ 10.00 ಗಂಟೆಯ ವರೆಗೆ ಪೋಲಿಸರು ಪಂಚನಾಮೆ

ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯು ಗುನ್ನಾ ಜಾಗೆಯ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 (ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೋಲಿಸರು 2 ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಛಾಯಾಚಿತ್ರಗಳಲ್ಲಿ ಸಾಕ್ಷಿ ತಾನು ಇರುವುದಾಗಿ ಗುರುತಿಸಿದ್ದರಿಂದ ಸದರಿ ಛಾವಚಿತ್ರಗಳನ್ನು ಈಗಾಗಲೇ ನಿಪಿ.8 ಮತ್ತು ನಿಪಿ.9 ಎಂದು ಗುರುತಿಸಲಾಗಿದೆ. ನಾನು ಈ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ನ ಸಸಅ ರವರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಮತ್ತು ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸಸಅ ರವರಿಗೆ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಿಲಾಯಿತು)

ಪಾಟೀ ಸವಾಲು ಮಾನ್ಯ ಸಸಅ ರವರಿಂದ

ದಿಃ 20.02.2024 ರಂದು ರಾತ್ರಿ 10.00 ಗಂಟೆ ಸುಮಾರಿಗೆ 1 ನೇ ಆರೋಪಿತನು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕಪಾಳಕ್ಕೆ ಬೆನ್ನಿಗೆ ಹೊಡೆದಿರುತ್ತಾನೆ ಹಾಗೂ 2 ಮತ್ತು 3 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಚಾಸಾ-1 ರವರು ನನಗೆ ಹೇಳಿರುತ್ತಾರೆ ಎಂದರೆ ಸರಿ. 1 ನೇ ಆರೋಪಿತನು ಚಾಸಾ-1 ರವರ ತಾಳಿ ತೆಗೆದು ಮನೆಯಿಂದ ಹೊರಗಡೆ ಹಾಕಿರುತ್ತಾನೆ ಎಂದರೆ ಸರಿ. ಚಾಸಾ-1 ರವರು ದಿಃ 23.02.2024 ರಂದು ದೂರು ದಾಖಲಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು:- ಆರೋಪಿತರ ಪರವಾಗಿ **Sri. VRP,** ವಕೀಲರಿಂದ</u>

ದಿಃ 20.02.2024 ರಂದು ನಾನು ತೇರಿನ ಮನೆಯ ಬಳಿ ನಿಂತಿದ್ದೆ. ನನಗೆ ಘಟನೆ ಕುರಿತು ದಿಃ 20.02.2024 ರ ಬೆಳಿಗ್ಗೆ 9.00 ಗಂಟೆಗೆ ತಿಳಿದು ಬಂದಿರುತ್ತದೆ. ಓಣಿಯಲ್ಲಿರುವ ಜನರು ಘಟನೆ ಮಾಹಿತಿ ತಿಳಿಸಿರುತ್ತಾರೆ. ಘಟನೆಯ ಸತ್ಯತೆ ತಿಳಿದುಕದೊಳ್ಳಲು ನಾನು ಅಕ್ಕ ಪಕ್ಕದ ಮನೆಯವರನ್ನು ವಿಚಾರಿಸಿರುತ್ತೇನೆ. 1 ನೇ ಆರೋಪಿತನ ಮನೆಯ ಎದುರುಗಡೆ ಇರುವ ಶಿಗ್ಲಿಮಠ ಮತ್ತು ಹುರಕಡ್ಲಿ ಇವರನ್ನು ವಿಚಾರಿಸಿರುತ್ತೇನೆ. ಆರೋಪಿತರ ಮನೆಯ ಅಕ್ಕ ಪಕ್ಕದಲ್ಲಿ ನಮ್ಮ ಸಂಬಂಧಿಕರ ಮನೆಗಳು ಇವೆ ಎಂದರೆ ಸರಿಯಲ್ಲ. ನಾನು, ಚಾಸಾ-1, 4 ಮತ್ತು 5 ರವರನ್ನು ದೂರು ನೀಡಲು ಕಳುಹಿಸಿಕೊಟ್ಟಿರುತ್ತೇನೆ. 1 ನೇ ಆರೋಪಿ ಮತ್ತು ಚಾಸಾ-1 ರವರ ಮದುವೆಯು ಅಂತರ್ರಜಾತಿ ವಿವಾಹ ಎಂದರೆ ಸರಿ. ಈ ಮದುವೆಯ ವಿಚಾರವಾಗಿ 1 ನೇ ಆರೋಪಿ ಮತ್ತು ಆತನ ಕುಟುಂಬದ ಮೇಲೆ ನಮಗೆ ಕೋಪ ಮತ್ತು ಸಿಟ್ಟು ಇರುತ್ತದೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಯಾವುದೇ ಕಿರುಕುಳ ನೀಡದೆ ಇದ್ದರೂ ಹಾಗೂ ಅವಾಚ್ಯ ಶಬ್ದಗಳಿಂದ ಬೈಯದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೊಲ ಮನೆ ಕೆಲಸ ಮಾಡುತ್ತೇನೆ. ನನ್ನದು ಸ್ವಂತ ಕಮತ ಇರುತ್ತದೆ ಎಂದರೆ ಸರಿ. ಪೆಬ್ರ್ರವರಿ ತಿಂಗಳಲ್ಲಿ ಸಾಮಾನ್ಯವಾಗಿ ರೈತರಿಗೆ ಸುಗ್ಗಿ ಸಮಯ ಎಂದರೆ ಸರಿ. ಸದರಿ ತಿಂಗಳಲ್ಲಿ ಸಾಮಾನ್ಯವಾಗಿ ಎಲ್ಲಾ ರೈತರು ಮುಂಜಾನೆ ಜಮೀನಿಗೆ ಹೋಗಿ ಮಧ್ಯಾಹ್ನ ಹಿಂದಿರುಗುತ್ತಾರೆ ಎಂದರೆ ಸರಿ. ಚಾಸಾ-1 ನನ್ನ ಮೊಮ್ಮಗಳಾಗಬೇಕು. ನನ್ನ ಮತ್ತು ಚಾಸಾ-1 ರವರು ಇದ್ದ ಆರೋಪಿತರ ಮನೆ ಸುಮಾರು ಅರ್ಧ ಕೀಲೋ ಮೀಟರ ಅಂತರದಲ್ಲಿ

ಇರಬಹುದು. ಚಾಸಾ-1 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ನಾನು ಸದರಿ ದಿನದಂದು ಶಿಗ್ಲಿಮಠದ ಇಟ್ಟಗೆ ಬಸವಣ್ಣ ಗುಡಿಯ ಬಳಿ ನಿಂತಿದ್ದೆ. ಸದರಿ ಗುಡಿಯ ಬಳಿ ಸುಮಾರು 10 ರಿಂದ 15 ಜನ ನಿಂತಿದ್ದೇವು. ಚಾಸಾ-1 ನನ್ನ ಮೊಮ್ಮಗಳು ಇರುವ ಕಾರಣ ಒಬ್ಬರಿಗೊಬ್ಬರು ಸಹಾಯ ಮಾಡಲು ನನ್ನನ್ನು ಪಂಚರಾಗಿ ಸಹಾಯ ಮಾಡಲು ನನ್ನನ್ನು ಕರೆದಿರುತ್ತಾರೆ.

ನಾನು 7 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ಜನನ ದಿನಾಂಕ 24.07.1962 ಎಂದು ನಮೂದಿಸಲಾಗಿದೆ. ನನಗೆ ಪಂಚರಾಗಿ ಸಹಕರಿಸಲು ಅಲ್ಲಿ ನಿಂತಿದ್ದ ನನ್ನನ್ನು ಮತ್ತು ಚಾಸಾ-2 ರವರನ್ನು ಹಿರಿಯರು ಬಂದು ಕೇಳಿರುತ್ತಾರೆ. ಚಾಸಾ-2 ರವರು ಚಾಸಾ-1 ರವರ ತಂದೆಯ ಮನೆಯ ಓಣಿಯಲ್ಲಿ ಇರುವ ವ್ಯಕ್ತಿ ಎಂದರೆ ಸರಿ. ನಿಪಿ.2 ರ ಬರವಣಿಗೆ ಮಾಹಿತಿ ನನಗೆ ಇರುವುದಿಲ್ಲ. ನಾನು ಚಾಸಾ-1 ರವರ ದೊಡ್ಡಪ್ಪನಾಗಿರುವ ಕಾರಣ ಯಾವುದೇ ಪಂಚನಾಮೆ ಮಾಡದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.